## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಗುರುಪ್ರಸಾದ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಡಿ. ಅನಂತಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ಜಿಎಲ್‌ಬಿ/2898/2013/ಡಿಆರ್‌ಇ-5, ದಿ:10.03.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 20.02.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಈ ದೂರನ್ನು ಶ್ರೀ ಕೆ. ವಾಸಣ್ಣ, ಬಿನ್ ವೆಂಕಟಪ್ಪ, ಮರುತ್ಲಾ ಗ್ರಾಮ, ಡಿ. ಅನಂತಪುರ ಅಂಚೆ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಗುರುಪ್ರಸಾದ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಡಿ ಆನಂತಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2. ದೂರುದಾರರು ತಮ್ಮ ದೂರಿನಲ್ಲಿ:- ದೂರುದಾರರ ಗ್ರಾಮದ ಗೋವಿಂದಪ್ಪ ಇವರು ಪಂಚಾಯಿತಿಯಲ್ಲಿ ನೀರುಗಂಟಿ ಅಂತ ಕಳೆದ 12-13 ವರ್ಷಗಳಿಂದ ಕೆಲಸ ಮಾಡುತ್ತಿದ್ದರು ಅವರ ಮೇಲೆ ಹಲವಾರು ಕಳ್ಳತನದ ಪ್ರಕರಣಗಳು ದಾಖಲಾಗಿದ್ದವು ದಿ:13.03.2010 ರಿಂದ 10.02.2013 ರವರೆಗೆ ಮತ್ತು 10.02.2013 ರಿಂದ ದೂರು ಸಲ್ಲಿಸುವವರೆಗೂ ತೆರೆ ಮರಿಸಿಕೊಂಡಿದ್ದರು ಅವರ ವಿರುದ್ಧ ಉದ್ಘೋಷಣೆ, ಜಾಮೀನು ರಹಿತ ವಾರೆಂಟುಗಳನ್ನು ಕ್ರಿಮಿನಲ್ ನ್ಯಾಯಾಲಯವು ಕೊಟ್ಟಿತ್ತು ಆದರೆ ಎದುರುದಾರರು ಸದರಿ ಗೋವಿಂದಪ್ಪನಿಗೆ ಗ್ರಾಮ ಸಭೆಗೆ ಬರಲು ಅನುಮತಿಸಿದ್ದಾರೆ. ಅವರಿಗೆ ಕೊಡಬೇಕಾದ ವೇತನವನ್ನೆಲ್ಲಾ ಪಾವತಿಸಿದ್ದಾರೆ. ಎದುರುದಾರರು ಸದರಿ ನೀರುಗಂಟಿಯು ಜೈಲಿನಲ್ಲಿದ್ದ ಅವಧಿಗೂ ಸಹ ಸದರಿ ಗೋವಿಂದಪ್ಪನಿಗೆ ಸಂಬಂಳವನ್ನು ಬಟವಾಡೆ ಮಾಡಿದ್ದಾರೆ. ಕಾರ್ಯನಿರ್ವಾಹ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಂಡೂರು ಇವರಿಗೆ ದೂರು ಕೊಟ್ಟರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನೀರುಗಂಟಿಯು ದಿ: 13.03.2010 ರಿಂದ 26.05.2010 ರವರೆಗೆ ಮತ್ತು ನಂತರ 10.02.2013 ರಿಂದ ಬೇರೆ ಪ್ರಕರಣದಲ್ಲಿ ಜೈಲಿನಲ್ಲಿದ್ದರು ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

3. ಈ ದೂರಿನ ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ದೂರಿನ ಅಂಶಗಳನ್ನು ಅವರು ಪುನರ್ ಉಚ್ಚರಿಸಿರುತ್ತಾರೆ.

5. ಈ ಪ್ರಕರಣವನ್ನು ಪೋಲೀಸ್ ವರಿಷ್ಠಾಧಿಕಾರಿ ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ರವರಿಗೆ ವಹಿಸಲು ಗೌರವಾನ್ವಿತರ ಆದೇಶವಾಗಿದೆ. ಪೋಲೀಸ್ ವರಿಷ್ಠಾಧಿಕಾರಿ ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ರವರು ತಮ್ಮ

ವರದಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಗುರುಪ್ರಸಾದ್ ಇವರು ಗೋವಿಂದಪ್ಪ ರವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಸದರಿ ನೀರುಗಂಟೆ ಕಾರಗೃಹದಲ್ಲಿರುವಾಗ ಇವರ ಹೆಂಡತಿ ಶ್ರೀಮತಿ ನರಸಮ್ಮ ಇವರು ಕೆಲಸ ನಿರ್ವಹಿಸುತ್ತಿದ್ದರು ಆದ್ದರಿಂದ ಅವರು ಇವರಿಗೆ ಸಂಬಳ ಬಟವಾಡೆ ಮಾಡಿದ್ದೆಂದು ವರದಿಯಲ್ಲಿ ಸಲ್ಲಿಸಿದ್ದು ಗೌರವಾನ್ವಿತ ಆದೇಶದಂತೆ ಕಾರ್ಯನಿರ್ವಾಹ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಬಳ್ಳಾರಿ ಇವರಿಗೆ ನೀರುಗಂಟೆಯು ಕಾರಾಗೃಹದಲ್ಲಿದ್ದ ಅವಧಿಗೆ ನೀಡಿದ ಬಟವಾಡಿಯನ್ನು ವಸೂಲಾತಿ ಮಾಡುವಂತೆ ಮತ್ತು ನೀರುಗಂಟಿಯ ವಿರುದ್ಧ ಕ್ರಮ ಜರುಗಿಸುವಂತೆ ಸೂಚಿಸಲಾಗಿದೆ. ಎದುರುದಾರರಿಂದ ತನಿಖಾ ವರದಿಯ ಮೇಲೆ ಆಕ್ಷೇಪಣೆಗಳನ್ನು ಕೇಳಲಾಗಿದೆ. ಮುಖ್ಯ ಕಾರ್ಯನಿರ್ವಾಹ ಅಧಿಕಾರಿ, ಜಿಲ್ಲಾ ಪಂಚಾಯಿತಿ ಇವರು ತಮ್ಮ ವರದಿ ಸಲ್ಲಿಸಿ ನೀರುಗಂಟಿಯನ್ನು ಗ್ರಾಮ ಪಂಚಾಯಿತಿಯ ಠರಾವು ದಿ:22.08.2013 ರಂತೆ ಕೆಲಸದಿಂದ ತೆಗೆದು ಹಾಕಲಾಗಿದೆ. ಅದರಿಂದ ಬಟವಾಡಿ ವಸೂಲಾತಿ ಮಾಡಲಾಗಿಲ್ಲ ಗೊವಿಂದಪ್ಪ ಇವರು ನ್ಯಾಯಾಂಗ ಬಂಧನದಲ್ಲಿದ್ದ ಸಂದರ್ಭದಲ್ಲಿ ಯಾವುದೇ ವೇತನ ಪಾವತಿಸಿರುವುದಿಲ್ಲ ಅಂತ ಹೇಳಿದ್ದಾರೆ. ದಿನಾಂಕ 30-06-2015 ರಂದು ನನ್ನ ಹಿಂದಿನ ಅಧಿಕಾರಿಯೂ ಅಂತಿಮ ಟಿಪ್ಪಣಿ ಸಲ್ಲಿಸಿದ್ದು ಕಲಂ 12(3) ರ ಅಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಗೌರವಾನ್ವಿತರ ಆದೇಶ ಪಡೆದಿದ್ದಾರೆ. ಕಡತವನ್ನು ಪುನಃ ಪರಿಶೀಲಿಸಿ ದಿ:13.03.2010 ರಿಂದ 26.05.2010 ರವರೆಗೆ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಇದ್ದ ಸಂದರ್ಭದಲ್ಲಿ ಎದುರುದಾರರು ಗೊವಿಂದಪ್ಪನಿಗೆ ವೇತನ ನೀಡುತ್ತಾರೆ ಎಂದು ಆಪಾದಿಸಿದ್ದು, ಮುಖ್ಯ ಕಾರ್ಯನಿರ್ವಾಹ ಅಧಿಕಾರಿ, ರವರು ಬಟವಾಡೆ ಮಾಡಿಲ್ಲ ಅಂತ ಹೇಳುತ್ತಿರುವುದರಿಂದ ಎದುರುದಾರರು ಸಂಬಳ ಬಟವಾಡೆ ಮಾಡಿದ್ದಾರೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟವಾಗಿ ವರದಿ ಸಲ್ಲಿಸಲು ಕೋರಲಾಗಿದೆ. ಪೋಲೀಸ್ ವರಿಷ್ಠಾಧಿಕಾರಿ ಅವರು ವೇತನವನ್ನು ಬ್ಯಾಂಕಿಗೆ ಮತ್ತು ನಗದು ರೂಪದಲ್ಲಿ ಬಟವಾಡೆ ಮಾಡಿದ್ದಾರೆಂದು ವರದಿ ಸಲ್ಲಿಸಿದ್ದಾರೆ. ಎದುರುದಾರರು ಈ ವರದಿಗೆ ಪ್ರತ್ಯುತ್ತರ ಸಲ್ಲಿಸಿದ್ದು ಗೋವಿಂದಪ್ಪ ಇವರು ನ್ಯಾಯಾಂಗ ಬಂಧನದಲ್ಲಿದ್ದ ವಿಷಯ ನನಗೆ ತಿಳಿದಿರಲಿಲ್ಲ ಅಧೀನ ಅಧಿಕಾರಿಗಳು ಮತ್ತು ನೌಕರರು ನ್ಯಾಯಾಂಗ ಬಂಧನದ ವಿಷಯವನ್ನು ಯಾರೂ ನನಗೆ ತಿಳಿಸಿಲ್ಲ ಹಿಂದಿನ ಕಾರ್ಯದರ್ಶಿಗಳು ಗೋವಿಂದಪ್ಪನ ಹೆಂಡತಿ ನರಸಮ್ಮಳಿಗೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳ ವೇತನವನ್ನು ಮಂಜೂರು ಮಾಡಿದ ಬಗ್ಗೆ ಬಟವಾಡೆ ಪುಸ್ತಕದಲ್ಲಿ ನಮೂದಿಸಲಾಗಿತ್ತು. ಮರುಟ್ಲಾ ಗ್ರಾಮ ಜನರಿಗೆ ನೀರಿನ ತೊಂದರೆಯಾಗಬಾರದೆಂದು ಕಡುಬಡತನದಲ್ಲಿರುವ ಅವರ ಕುಟುಂಬಕ್ಕೆ ಗೊವಿಂದಪ್ಪನ ಹೆಂಡತಿ ನರಸಮ್ಮ ಇವರಿಗೆ ಹೊಣೆ ನೀಡಿದ್ದು ಇರುತ್ತದೆ. ಆದ್ದರಿಂದ ಈ ದೂರನ್ನು ಮುಕ್ತಾಯಗೊಳಿಸುವಂತೆ ಕೋರುತ್ತಾರೆ.

6) ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ಶ್ರೀಮತಿ ನರಸಮ್ಮ ಎನ್ನುವ ಗೊವಿಂದಪ್ಪನ ಹೆಂಡತಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಯಾವ ಕ್ರಮವನ್ನು ಅನುಸರಿಸಿದ್ದಾರೆನ್ನುವುದನ್ನು ಉದ್ದೇಶಿಸಿಲ್ಲ ನೌಕರರ ನೇಮಕಾತಿ ಮತ್ತು ನಿಯಂತ್ರಣಗಳು. ಮುಖ್ಯ ಕಾರ್ಯನಿರ್ವಾಹ ಅಧಿಕಾರಿ, ರವರ ಪೂರ್ವ ಅನುಮೋದನೆಗೆ ಒಳಪಟ್ಟಿದೆ ಅಂತ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 113 ರ ಅಡಿಯಲ್ಲಿ ಸ್ಪಷ್ಟವಾಗಿ ವಿಧಿಸಲಾಗಿದೆ. ನೀರುಗಂಟಿಯು ಕಾರಾಗೃಹದಲ್ಲಿದ್ದ ಅವಧಿಯಲ್ಲಿ ಬೇರೊಬ್ಬರನ್ನು ನೇಮಕ ಮಾಡಿಕೊಳ್ಳಬೇಕಾದರೆ ಕೇವಲ ಪಂಚಾಯಿತಿಯ ಠರಾವು ಸಾಕಾಗುವುದಿಲ್ಲ, ಮುಖ್ಯ ಕಾರ್ಯನಿರ್ವಾಹ ಅಧಿಕಾರಿ, ರವರಿಂದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಎದುರುದಾರರು ತನ್ನ ಅಧೀನ ಕೆಲಸಗಾರರ ವಿಷಯಗಳು ತಮಗೆ ಗೊತ್ತೇ ಇಲ್ಲ ಅಂತ ಹೇಳುವುದು ಮತ್ತು ಯಾವುದೇ ಪೂರ್ವಾನುಮತಿ ಇಲ್ಲದೆ ಇನ್ನೊಬ್ಬ ಪಂಚಾಯಿತಿ ನೌಕರರನ್ನು ನೇಮಕ ಮಾಡಿಕೊಂಡು ಅವರಿಗೆ ವೇತನ ಕೊಟ್ಟಿರುವುದು ಕರ್ತವ್ಯಲೋಪವಾಗುತ್ತದೆ.

7) ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3 (i) (ii) ಮತ್ತು (iii) ರಲ್ಲಿ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಗುರುಪ್ರಸಾದ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಡಿ. ಅನಂತಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (i) (ii) ಮತ್ತು (iii) ರಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/234/ಗ್ರಾಪಂಕಾ/2017 ಬೆಂಗಳೂರು, ದಿನಾಂಕ- 28-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಗುರುಪ್ರಸಾದ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಡಿ. ಅನಂತಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಷರಾ: ಪುಟ ಸಂಖ್ಯೆ: 1 ರಿಂದ 103).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸಂಡೂರು ತಾಲ್ಲೂಕು, ಮತ್ತು ಬಳ್ಳಾರಿ ಜಿಲ್ಲೆ.
6. ಶ್ರೀ ಗುರುಪ್ರಸಾದ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಡಿ. ಅನಂತಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.